# ಮಹಾ ಪ್ರವಾದಿಯಾದ ಮೋಶೆ



ಸುನಯನ ವಾಲ್ಟರ್ಸ್

ಮಹಾಪ್ರವಾದಿಯಾದ ಮೋಶೆಯಂತಹ ವ್ಯಕ್ತಿ ಇಸ್ರಾಯೇಲ್ಯರಲ್ಲಿ ಇನ್ನೊಬ್ಬನಿಲ್ಲವೆಂದರೆ ತಪ್ಪಾಗಲಾರದು. ಮೋಶೆ ಮತ್ತು ಎಲೀಯ ಇವರಿಬ್ಬರು ಅವರವರ ಕಾಲಕ್ಕೆ ಅಗತ್ಯಕ್ಕೆ ತಕ್ಕಂತೆ ದೇವರು ರೂಪಿಸಿದ ಶಕ್ತಿಗಳು. ಮನುಷ್ಯರೂಪಿ ಚೈತನ್ಯಗಳು ಯೆಹೂದಿ, ಇಸ್ಲಾಂ, ಕ್ರೈಸ್ತ – ಈ ಮೂರು ಧರ್ಮಗಳ ನಂಬಿಕೆಯಲ್ಲಿಯೂ ಮೋಶೆಯು ಪ್ರಾಶಸ್ತ್ಯ ಪಡೆದ ಮಹಾಪ್ರವಾದಿ. ಚರಿತ್ರಾಕಾರರು ಮತ್ತು ಟೀಕಾಕಾರರಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಕಂಚಿನ ಶಕದ ಅಂತ್ಯಕಾಲದಲ್ಲಿ ಇಬ್ರಿಯರನ್ನು ಕಾನಾನ್ ದೇಶದಲ್ಲಿ ಒಗ್ಗೂಡಿಸಿದ, ಆಧ್ಯಾತ್ಮಿಕ, ರಾಜಕೀಯ ಮತ್ತು ಚಾರಿತ್ರಿಕ ಮಹತ್ವ ಹೊಂದಿದ ಮಹಾ ಪ್ರವಾದಿ ಒಬ್ಬನಿದ್ದನೆಂದು ಚರಿತ್ರಾಕಾರರು ನಿರೂಪಿಸಿದ್ದಾರೆ. ಇದನ್ನು ಐಗುಪ್ತ ದೇಶದ ಹಿನ್ನಲೆಯಲ್ಲಿ ಜೀವನ ಚರಿತ್ರೆಗಳ ಅಧ್ಯಯನದಿಂದ ನಿರೂಪಿಸಲಾಗಿದೆ.

ಮೋಶೆಯ ಜೀವಾವಧಿ 120 ವರ್ಷಗಳು 1391 – 1271 **BC** ಎಂದರೆ ಕಂಚಿನ ಶಕದ ಅಂತ್ಯಕಾಲ. ಆತನ ಜೀವನ ಚರಿತ್ರೆಯು ಕುತೂಹಲಕಾರಿಯಾಗಿದ್ದು ಒಬ್ಬ ಮನುಷ್ಯನು ತನ್ನ ಜೀವಿತಾವಧಿಯಲ್ಲಿ ಅಷ್ಟೊಂದು ಪಾತ್ರಗಳನ್ನು ನಿರ್ವಹಿಸಲು ಸಾಧ್ಯವೇ ಎಂದು ಅಚ್ಚರಿ ಮೂಡುತ್ತದೆ. ಆದರೆ ಆತನ ಹಿಂದೆ ದೇವರ ಕೈ ಕೆಲಸ ಮಾಡುತ್ತಿತ್ತು. ಮತ್ತು ಆತನ ಜೀವನ ಒಂದು ಕೆಲಸಕ್ಕಾಗಿಯೇ ಮೀಸಲಾಗಿತ್ತು.

ಯೋಸೇಫನ ಕಾಲದಲ್ಲಿ ಮೋಶೆಯ ಪೂರ್ವಜರು ಐಗುಪ್ತ್ಯಕ್ಕೆ ವಲಸೆ ಬಂದವರು. ಆಗ ರಾಜಪರಿವಾರದಲ್ಲಿ ಅವರಿಗೆ ಪ್ರಾಶಸ್ತ್ಯವಿತ್ತು. ಶತಕಗಳೇ ಕಳೆದಂತೆ ಅವರು ಸಂಖ್ಯೆಯಲ್ಲಿಯೂ ಬಲದಲ್ಲಿಯೂ ಹೆಚ್ಚತೊಡಗಿದರು. ಹೊಸ ಅರಸರು ಬಂದರು. ಅವರ ಅಭಿವೃದ್ಧಿಯನ್ನು ಕಂಡು ಕಳವಳಗೊಂಡ ಫರೋಹನು ಅವರ ಬೆಳವಣಿಗೆಯನ್ನು ಹೇಗಾದರೂ ನಿಯಂತ್ರಿಸಬೇಕೆಂದು ಅಂದುಕೊಂಡನು. ಏಕೆಂದರೆ ಯುದ್ಧಕಾಲದಲ್ಲೇನಾದರೂ ಅವರು ತಿರುಗಿ ನಿಂತರೆ ಸರ್ವನಾಶವಾಗುವುದೆಂದು ಅವನಿಗೆ ಭಯವಾಯಿತು. ಈ ಕಾರಣಕ್ಕಾಗಿ ಅವರನ್ನು ಗುಲಾಮತನಕ್ಕೆ ತಳ್ಳಿ ಕಠಿಣ ದುಡಿಮೆಯಿಂದ ಹಿಂಸಿಸಿದರೂ ಅವರು ಬಹಳವಾಗಿ ಹೆಚ್ಚಿದರು. ಅವರಿಗೆ ಹುಟ್ಟುವ ಎಲ್ಲಾ ಗಂಡು ಮಕ್ಕಳನ್ನು ಕೊಲ್ಲಬೇಕೆಂದು ಸೂಲಗಿತ್ತಿಯವರಿಗೆ ಸೂಚಿಸಿದರೂ ಆ ಸೂಲಗಿತ್ತಿಯರು ದೇವರಿಗೆ ಭಯಪಡುವವರಾದುದರಿಂದ ಅದನ್ನು ಅನುಸರಿಸಲಾರದೆ ಹೋದರು. ಕೊನೆಗೆ ಇಸ್ರಾಯೇಲ್ಯರ ಪ್ರತಿಯೊಂದು ಗಂಡು ಮಗುವನ್ನು ನೈಲ್ ನದಿಯಲ್ಲಿ ಮುಳುಗಿಸಿ ಕೊಲ್ಲಬೇಕೆಂಬ ಕ್ರೂರವಾದ ಆಜ್ಞೆಯನ್ನು ಹೊರಡಿಸಲಾಯಿತು. ಆ ಸಮಯದಲ್ಲಿಯೇ ಮೋಶೆಯ ಜನನವಾಯಿತು.

ತಂದೆ ಅಮ್ರಾಮನು ತಾಯಿ ಯೋಕಬೆದಳು. ಲೇವಿಯ ವಂಶದವಳು. ಅಕ್ಕ ಮಿರಿಯಮ್. ಮಗುವು ಅರಸನ ಆಜ್ಞೆಗೆ ಬಲಿಯಾಗುವ ಭಯದಿಂದ ತಾಯಿಯು ಮಗುವನ್ನು ಒಂದು

ಪೆಟ್ಟಿಗೆಯಲ್ಲಿಟ್ಟು ನೈಲ್ ನದಿಯಲ್ಲಿ ಆಪುಹುಲ್ಲಿನ ಮರೆಯಲ್ಲಿಟ್ಟಳು. ನದಿಗೆ ಸ್ನಾನಕ್ಕೆಂದು ಬಂದ ರಾಜಕುವರಿಯು ಆ ಸುರಸುಂದರ ಮಗುವನ್ನು ಕಂಡು ಎತ್ತಿಕೊಂಡಳು. ದೂರದಿಂದ ವೀಕ್ಷಿಸುತ್ತಿದ್ದ ಮಿರಿಯಮಳು ಸತ್ಯವನ್ನು ಮರೆಮಾಡಿ, ಮಗುವಿನ ಪೋಷಣೆಗಾಗಿ ದಾದಿಯೆಂದು ಮಗುವಿನ ತಾಯಿಯನ್ನೇ ಕರೆತಂದಳು. ಹೀಗೆ ಮೋಶೆಯ ಬಾಲ್ಯ, ಕೌಮಾರ್ಯ ಸುಖಕರವಾಗಿದ್ದು ಯೌವನಾವಸ್ಥೆಯವರೆಗೂ ಅರಮನೆಯ ಸಕಲ ವೈಭವದಿಂದೊಡಗೂಡಿತ್ತು.

ಇತ್ತ, ಗುಲಾಮರಾಗಿದ್ದ ಇಸ್ರಾಯೇಲ್ಯರು ಇಟ್ಟಿಗೆ ತಯಾರಿಸುವ ಬಿಟ್ಟಿ ಕೆಲಸದಲ್ಲಿ ನಿಕೃಷ್ಟ ಪರಿಸ್ಥಿತಿಯಲ್ಲಿದ್ದು, ಯಾವುದೇ ನಾಗರಿಕತೆಯಿಂದ ವಂಚಿಸಲ್ಪಟ್ಟು ಪ್ರಾಣಿಗಳಂತೆ ಜೀವಿಸುತ್ತಿದ್ದರು. ಅವರಿಗೆ ತಮ್ಮ ದೇವರು, ಧಾರ್ಮಿಕ ವಿಧಿಗಳು, ಧರ್ಮ ಯಾವುದೂ ಪ್ರಜ್ಞೆಯಲ್ಲಿರಲಿಲ್ಲ. ಮೋಶೆಯು ಐಗುಪ್ತದ ಅರಮನೆಯಲ್ಲಿದ್ದರೂ ಆತನಿಗೆ ತನ್ನ ಮೂಲ ಧರ್ಮ, ವಂಶಗಳ ಅರಿವಿತ್ತು. ತನ್ನ ಜನರ ಬಗ್ಗೆ ಅಭಿಮಾನವಿತ್ತು. ಇದರ ಪರಿಣಾಮವಾಗಿ ಒಂದು ದಿನ ಅವನು ತನ್ನವರನ್ನು ಅನ್ಯಾಯವಾಗಿ ಹಿಂಸಿಸುತ್ತಿದ್ದ ಐಗುಪ್ತ ಅಧಿಕಾರಿಯೊಬ್ಬನನ್ನು ಹೊಡೆದು ಕೊಂದು ಬಿಟ್ಟನು. ಮತ್ತೊಮ್ಮೆ ಇಬ್ಬರು ಸ್ವಕುಲದವರೇ ಕಾದಾಡುತ್ತಿದ್ದುದನ್ನು ಕಂಡು ಮನನೊಂದ ಆತನು ಬುದ್ಧಿ ಹೇಳಲು ಮಧ್ಯೆ ಪ್ರವೇಶಿಸಿದಾಗ ಮೋಶೆಗೆ ಆಘಾತ ಕಾದಿತ್ತು? "ಆ ಐಗುಪ್ತನನ್ನು ಕೊಂದಂತೆ ನನ್ನನ್ನು ಕೊಲ್ಲಬೇಕೆಂದಿದ್ದೀಯಾ?" ಎಂದು ಅವರಲ್ಲೊಬ್ಬನು ಸಿಡಿದೆದ್ದಾಗ ತನ್ನ ಗುಟ್ಟು ರಟ್ಟಾಗಿದೆಯೆಂದು ಮನವರಿತ ಮೋಶೆಯು ಭಯಭೀತನಾದನು. ಪರಿಣಾಮಕ್ಕೆ ಹೆದರಿದ ಮೋಶೆಯು ದೇಶ ಬಿಟ್ಟು ಪಲಾಯನ ಮಾಡಬೇಕಾಯಿತು.

ಮಿದ್ಯಾನ್ ತಲುಪಿದ ಮೋಶೆಯು ಬಾವಿಯ ಬಳಿ ದಣಿವಾರಿಸಿಕೊಳ್ಳುತ್ತಿದ್ದಾಗ, ಮಿದ್ಯಾನ್ಯರ ಆಚಾರ್ಯನಾದ ಇತ್ರೋನನ 7 ಮಂದಿ ಹೆಣ್ಣು ಮಕ್ಕಳನ್ನು ಬೆದರಿಸುತ್ತಿದ್ದ ಕುರುಬರನ್ನು ಓಡಿಸಿ ಅದರ ಕುರಿಗಳಿಗೆ ನೀರು ಕುಡಿಸಲು ಸಹಾಯ ಮಾಡಿದನು. ಇದರಿಂದ ಮೋಶೆಯ ಮೇಲೆ ಪ್ರಸನ್ನನಾದ ಇತ್ರೋನನು ಪರದೇಶಿಯಾದ ಆತನಿಗೆ ತನ್ನ ಮನೆಯಲ್ಲಿ ಆಶ್ರಯ ಕೊಟ್ಟದೇ ಅಲ್ಲದೆ ತನ್ನ ಮಗಳಾದ ಚಿಪ್ಪೋರಳನ್ನು ಅವನಿಗೆ ಮದುವೆ ಮಾಡಿಕೊಟ್ಟನು. ಅಲ್ಲಿ ಗೇರ್ಷೋಮನೆಂಬ ಮಗನೂ ಹುಟ್ಟಿದನು. "ನಾನು ಅನ್ಯದೇಶದಲ್ಲಿ ಪ್ರವಾಸಿಯಾಗಿದ್ದೇನೆ" ಎಂದು ಇದರ ಅರ್ಥ

ಈಗ ಯೆಹೋವನ ಕಾರ್ಯಕ್ಕೆ ಕಾಲ ಪರಿಪಕ್ವವಾಗಿತ್ತು. ಮೋಶೆಯು ಇತ್ರೋನನ ಕುರಿಮಂದೆಯನ್ನು ಮೇಯಿಸುತ್ತಾ ಕಾಡಿನ ಹಿಂದಿನ ಹೋರೇಬ್ ಎಂಬ ದೇವರ ಬೆಟ್ಟಕ್ಕೆ ನಡೆಸಲ್ಪಟ್ಟನು. ಅಲ್ಲಿ ಪ್ರಥಮವಾಗಿ ಮೋಶೆಗೆ ದೇವರ ದರ್ಶನವಾಯಿತು. ಒಂದು ಮುಳ್ಳಿನ ಪೊದೆಯಲ್ಲಿ ಉರಿಯುವ ಬೆಂಕಿ! ಆದರೆ ಪೊದೆ ಸ್ವಲ್ಪವೂ ಸುಟ್ಟಿಲ್ಲ! ಆ ಬೆಂಕಿಯೊಳಗಿನಿಂದ ಮೋಶೆಯ ಹೆಸರು ಹಿಡಿದು ಕರೆದ ದೇವರು ಹೇಳಿದ್ದು –

"ನಾನು ನಿನ್ನ ತಂದೆಯ ದೇವರು ಅಬ್ರಹಾಮನ ದೇವರು ಇಸಾಕನ ದೇವರು. ಯಾಕೋಬನ ದೇವರು" (ವಿ.ಕಾಂಡ 3 : 3) ದೈವದರ್ಶನವಾದರೆ ನಿಶ್ಚಿತವಾಗಿ ಮರಣ ಸಂಭವಿಸುವುದೆಂಬ ನಂಬಿಕೆ ಇದ್ದ ಆ ಕಾಲದಲ್ಲಿ ಈ ವಾಣಿಯನ್ನು ಕೇಳಿದ ಮೋಶೆಯು ಭಯಭೀತನಾಗಿ ಮುಖ ಮುಚ್ಚಿಕೊಂಡನು.

ಐಗುಪ್ತ್ಯಕ್ಕೆ ತಿರುಗಿ ಹೋಗಿ, ಫರೋಹನನ್ನು ಎದುರಿಸಿ, ದೇವರ "ಚೊಚ್ಚಲ ಮಗ"ನಂತಿರುವ ಇಸ್ರಾಯೇಲ್ಯರನ್ನು (ವಿಮೋ 4 : 22) ಗುಲಾಮತನದಿಂದ ಬಿಡುಗಡೆಗೊಳಿಸಿ ವಾಗ್ದತ್ತ

ದೇಶವಾದ, ಹಾಲೂ ಜೇನೂ ಹರಿಯುವ ಸಮೃದ್ಧ ಕಾನಾನ್ ದೇಶಕ್ಕೆ ಮುಟ್ಟಿಸುವ ಮಹಾ ಜವಾಬ್ದಾರಿಯು ದೇವರ ಬೆಟ್ಟದಲ್ಲಿ ಮೋಶೆಗೆ ವಹಿಸಲ್ಪಟ್ಟಿತು.

ಮೋಶೆಯು ತಾನು ಮಹಾದಂಡನಾಯಕ ನಾಗುವ ಕನಸು ಕಂಡವನಲ್ಲ. ಚತುರ ಮಾತುಗಾರನಲ್ಲ. ಶೀಘ್ರ ನಿರ್ಧಾರ ತಳೆದು ಯೋಜನೆಗಳನ್ನು ರೂಪಿಸುವ ಮಹತ್ವಾಕಾಂಕ್ಷಿಯಲ್ಲ. ಹಿಂಜರಿಕೆಯ ಸ್ವಭಾವದ ಈ ನಮ್ರನಾದ ವ್ಯಕ್ತಿಯನ್ನು ದೇವರು ಹೇಗೆ ರೂಪಿಸಿದನೆಂಬುದನ್ನು ನಾವು ಮುಂದೆ ಕಾಣುತ್ತೇವೆ.

ತಾನು ತಪ್ಪು ಮಾಡಿದ್ದಕ್ಕಾಗಿ ಬಿಟ್ಟು ಓಡಿ ಬಂದ ಸ್ಥಳಕ್ಕೆ ತಿರುಗಿ ಹೋಗಬೇಕು! ಫರೋಹನನ್ನು ಭೇಟಿಯಾಗಿ ಬೇಡಿಕೆ ಸಲ್ಲಿಸಬೇಕು! ಆತನು ಗುಲಾಮರನ್ನು ಬಿಡುಗಡೆಗೊಳಿಸಬೇಕು! 400 ವರ್ಷಗಳ ಕಾಲ ಗುಲಾಮರಾಗಿದ್ದು ತಮ್ಮ ಅಸ್ತಿತ್ವವನ್ನೇ ಮರೆತ ಕಡುಬಡವರಾದ ಲಕ್ಷಾಂತರ ಜನರ ಗುಂಪನ್ನು ಯಾವುದೇ ಪೂರ್ವ ತಯಾರಿ ಇಲ್ಲದೆ ಕಾಡು – ಮರುಭೂಮಿಗಳಲ್ಲಿ ನಡೆಸುತ್ತಾ ವರ್ಷಾದಿಕಾಲ ಗಮ್ಯದೆಡೆಗೆ ನಡೆಸಬೇಕು! ಇದೆಲ್ಲಾ ಸಾಧ್ಯವೇ?– ಎಂದು ಮೋಶೆ ಸಂಶಯಿಸಲಿಲ್ಲ. ಏಕೆಂದರೆ ದೇವರಿಂದ ಆರಿಸಲ್ಪಟ್ಟ ಆತನಲ್ಲಿ ನಂಬಿಕೆ ಇತ್ತು, ವಿಧೇಯತೆ ಇತ್ತು, ಸ್ವಜನರ ಕುರಿತಾದ ಆಳವಾದ ಸಹತಾಪವಿದ್ದು ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಆಕಾಂಕ್ಷೆ ಇತ್ತು. ಆದರೆ ತನ್ನ ಯೋಗ್ಯತೆಯ ಬಗ್ಗೆಯೇ ಆತನಿಗೆ ಹಿಂಜರಿಕೆ. ಹೀಗಾಗಿ ಮೋಶೆಯು ಮನಸ್ಸಿನಲ್ಲಿ ಹತ್ತಾರು ಪ್ರಶ್ನೆಗಳು ಎದ್ದವು. ಆತನು ಒಂದೊಂದಾಗಿ ತನ್ನ ಪ್ರಶ್ನೆಗಳನ್ನು ದೇವರ ಮುಂದಿಟ್ಟಾಗ ತಕ್ಕ ಪರಿಹಾರದಾಯಕ ಉತ್ತರಗಳಿಂದ ದೇವರು ಮೋಶೆಯನ್ನು ಸಂತೈಸುತ್ತಾನೆ.

ಪ್ರಶ್ನೋತ್ತರಗಳು ಹೀಗಿವೆ :

1) ಪ್ರ : ಇಷ್ಟು ದೊಡ್ಡ ಕಾರ್ಯಕ್ಕೆ ನಾನೆಷ್ಟರವನು? (ವಿಮೋ 3 : 12)

ಉ) ನಾನೇ ನಿನ್ನ ಸಂಗಡ ಇರುವೆನು ನಿನ್ನನ್ನು ಕಳುಹಿಸಿದನು ನಾನೇ.

2) ಪ್ರ :ಇಸ್ರಾಯೇಲ್ಯರು ನಿನ್ನನ್ನು ನಮ್ಮ ಬಳಿಗೆ ಕಳುಹಿಸಿದ ನಮ್ಮ ಪಿತೃಗಳ ದೇವರ ಹೆಸರೇನೆಂದು ಕೇಳಿದರೆ ನಾನು ಏನು ಹೇಳಬೇಕು? (ವಿಮೋ 3 : 13)

ಉ) ಇರುವಾತನೇ ಆಗಿದ್ದೇನೆ. ಇರುವಾತನೆಂಬಾತನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದನೆಂದು ಉತ್ತರ ಕೊಡಬೇಕು.

3) ಪ್ರ :ಅವರು ನನ್ನನ್ನು ನಂಬದೆ ನನ್ನ ಮಾತಿಗೆ ಕಿವಿಗೊಡದೆ ಹೋದಾರು ಯೆಹೋವನು ನಿನಗೆ ಕಾಣಿಸಿಕೊಂಡೇ ಇಲ್ಲವೆಂದು ಹೇಳಾರು (ವಿಮೋ 4 : 1)

ಉ) ದೇವರು ಆಗ ಮೋಶೆಗೆ 3 ಮಹತ್ಕಾರ್ಯಗಳನ್ನು ತಿಳಿಸಿಕೊಟ್ಟನು.

ಮೊದಲನೆಯದಾಗಿ ಅವನ ಕೈಯಲ್ಲಿದ್ದ ಕೋಲು ಹಾವಾಗಿ ಮಾರ್ಪಟ್ಟದ್ದು.

ಎರಡನೇಯದಾಗಿ ಅವನ ಕೈಯನ್ನು ಉಡಿಯಲ್ಲಿಟ್ಟಾಗ ತೊನ್ನು ಹತ್ತಿ ಬೆಳ್ಳಗಾದದ್ದು

ಮೂರನೆಯದಾಗಿ ನೈಲ್ ನದಿಯಿಂದ ನೀರನ್ನು ತೆಗೆದು ಚೆಲ್ಲಿದಾಗ ಅದು ರಕ್ತವಾಗುದೆಂಬ ಸೂಚನೆ. ಈ ಕಾರ್ಯಗಳನ್ನು ನೋಡಿದ ಮೇಲೆ ಇಸ್ರಾಯೇಲ್ಯರು ನಂಬುವರೆಂಬ ಭರವಸೆಯೂ ಕೊಡಲ್ಪಟ್ಟಿತು.

4) ಪ್ರ :ನಾನು ವಾಕ್ಚಾತುರ್ಯವಿಲ್ಲದವನು ನನ್ನ ಮಾತು ನಾಲಿಗೆಯೂ ಮಂದವಾಗಿದೆ.

ಉ) ಮನುಷ್ಯನಿಗೆ ಬಾಯಿಕೊಟ್ಟವರಾರು? ಯೆಹೋವನಾಗಿರುವ ನಾನಲ್ಲವೆ? ನೀನು

ಹೊರಟು ಹೋಗು. ನಾನು ನಿನ್ನ ಬಾಯಿಗೆ ಸಹಾಯವಾಗಿದ್ದು ನೀನು ಮಾಡಬೇಕಾದದ್ದನ್ನು ಬೋಧಿಸುವೆನು

5) ಯೆಹೋವನಿಂದ ಇಷ್ಟೆಲ್ಲಾ ಭರವಸೆ ದೊರೆತರೂ ಮೋಶೆಯು ಕೊನೆಯ ಅಸ್ತ್ರವೆಂಬಂತೆ ನುಡಿದನು - ಸ್ವಾಮೀ, ಈ ಕಾರ್ಯಕ್ಕೆ ಬೇರೊಬ್ಬನನ್ನು ನೇಮಿಸಬೇಕು" (ವಿಮೋ 4 : 13)

ಈಗ ಯೆಹೋವನು ಕೋಪಿಸಿದನು. ಹಠ ಮಾಡುವ ಮಗುವಿನ ಮೇಲೆ ತಂದೆಯು ಕೋಪಿಸಿದ ಹಾಗೆ ಪರಿಹಾರವಾಗಿ ಒಳ್ಳೆಯ ಮಾತುಗಾರನಾದ ಅಣ್ಣ ಆರೋನನನ್ನು ಅವನ ಸಹಾಯಕನಾಗಿ ನೇಮಿಸಲಾಯಿತು. "ನಿನ್ನನ್ನು ಎದುರುಗೊಳ್ಳಲು ಆರೋನನು ಬರುವನು. ನಿನ್ನ ಬಾಯಿಗೆ ಅವನ ಬಾಯಿಯು ಸಹಾಯಕವಾಗಿದ್ದು ಅವನೇ ನಿನಗೋಸ್ಕರ ಜನರ ಸಂಗಡ ಮಾತಾಡುವನು. ಅವನು ನಿನಗೆ ಬಾಯಂತಿರುವನು ನೀನು ಅವನಿಗೆ ದೇವರಂತಿರುವಿ (ವಿಮೋ 4 : 16, 17)

ದೇವರ ಅಪ್ಪಣೆಯಂತೆ ಅವನ ಕೈಯಲ್ಲಿದ್ದ ಸಾಮಾನ್ಯ ಕೋಲು ಮುಂದಿನ ದಿನಗಳಲ್ಲಿ ವಿಶಿಷ್ಟ ಸ್ಥಾನ ಪಡೆಯಿತು. ಅದರ ಮೂಲಕ ಮಹತ್ಕಾರ್ಯಗಳಾದವು. ಅದು ದೇವದಂಡವಾಯಿತು. ನಿರ್ಭಯತೆಯ ದಂಡವಾಯಿತು.

(ಮುಂದುವರಿಯುವುದು...)